**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಶಿಡ್ಲಘಟ್ಟ**

ಸಿಸಿ.555/2016

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಶಿವರಾಜು | ಸಿಡಬ್ಲೂ: **02** |
| ತಂದೆ/ಗಂಡನ ಹೆಸರು | ಃ | ಲೇಟ್ ಚಿಕ್ಕಮುನಿಕಾಳಪ್ಪ | ಪಿಡಬ್ಲೂ: **01** |
| ವಯಸ್ಸು | ಃ | 32 ವರ್ಷ | ಪ್ರಮಾಣೀಕರಿಸಲಾದ ದಿನಾಂಕ |
| ವೃತ್ತಿ | ಃ | ಚಾಲಕ | 01.08.2024 |
| ವಾಸ ಸ್ಥಳ | ಃ | ಬೈರಗಾನಹಳ್ಳಿ | |

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ**

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ದಾಖಲೆ ಸ್ಥಳ ಪಂಚನಾಮೆ ಆಗಿದ್ದು ಅದನ್ನು ನಿಪಿ.**1** ಎಂದು ಸಾಕ್ಷಿ ಸಹಿಯನ್ನು ನಿಪಿ.**1** ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಮಾದರಿ ಸೀಲಿನ ನಕಲಿನ ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.**2** ಎಂದು ಸಾಕ್ಷಿ ಸಹಿಯನ್ನು ನಿಪಿ.**2** ಎ ಎಂದು ಗುರುತಿಸಲಾಯಿತು. ನಿಪಿ.**1** ಮತ್ತು **2** ಕ್ಕೆ ನಾನು ಯಾವಾಗ ಎಲ್ಲಿ ಸಹಿ ಮಾಡಿರುತ್ತೀರ ಎಂದರೆ ಸಾಕ್ಷಿ ದಿಃ**10.02.2016** ರಂದು ನಾಚಗಾನಹಳ್ಳಿಯಲ್ಲಿ ಸುಮಾರು **01.30** ರಿಂದ **02** ಗಂಟೆ ಸಮಯದಲ್ಲಿ ಸಹಿ ಮಾಡಿರುತ್ತೇನೆ. ಆ ದಿನ ನಾನು, ಚಾ.ಸಾ.**3** ಮತ್ತು **5** ರವರು ದಿಬ್ಬೂರಹಳ್ಳಿಯಿಂದ ಆನೆಮೊಡಗು ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ನಾಚಗಾನಹಳ್ಳಿ ರಸ್ತೆಯ ಹತ್ತಿರ ಒಂದು ಅಪ್ಪೆ ಆಟೋವನ್ನು ನಿಲ್ಲಿಸಿ ಪರಿಶೀಲಿಸಿದಾಗ ಚಾಲಕ ಕುಳಿತುಕೊಳ್ಳುವ ಸೀಟಿನ ಕೆಳಗಡೆ ಒಂದು ಬಿಳಿ ಚೀಲದಲ್ಲಿ **22** ರಾಜ ವಿಸ್ಕಿ, **23** ಒರಿಜಿನಲ್ ಚಾಯ್ಸ್ , **18** ಹೈವಾರ್ಡ್ಸ್ ಚಿಯರ್ಸ್ ಕಂಡು ಬಂದಿರುತ್ತವೆ. ಅವುಗಳನ್ನು ಮಹಜರ್ ಜರುಗಿಸಿ ಅಮಾನತ್ತು ಪಡಿಸಲಾಗಿರುತ್ತದೆ. ಸಾಕ್ಷಿಗೆ ನ್ಯಾಯಾಲಯದಲ್ಲಿ ಹಾಜರು ಪಡಿಸಿರುವ **10** ಖಾಲಿ ರಾಜ ವಿಸ್ಕಿಯ ಟೆಟ್ರಾ ಪ್ಯಾಕೆಟಗಳು, **10** ಖಾಲಿ ಒರಿಜಿನಲ್ ಚಾಯ್ಸ್ಟೆಟ್ರಾ ಪ್ಯಾಕೆಟಗಳು ಮತ್ತು **06** ಖಾಲಿ ಹೈವಾರ್ಡ್ಸ್ ಚಿಯರ್ಸ್ ಟೆಟ್ರಾ ಪ್ಯಾಕೆಟಗಳು ತೋರಿಸಲಾಗಿ ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ.**1** ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದಲ್ಲಿ ಹಾಜರಿದ್ದ ಆರೋಪಿಯನ್ನು ನೋಡಿ ಆ ದಿನ ಆಟೋ ಚಾಲನೆ ಮಾಡುತ್ತಿದ್ದ ವ್ಯಕ್ತಿ ಎಂದು ಹೇಳುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಜೆ ವಿ ವಕೀಲರಿಂದಃ</u>**

ನಾನು ಅಬಕಾರಿ ಕಛೇರಿಯಲ್ಲಿ ಸುಮಾರು **8** ವರ್ಷಗಳಿಂದ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಹಲವಾರು ಅಬಕಾರಿ ಪ್ರಕರಣಗಳಲ್ಲಿ ಸಾಕ್ಷಿದಾರನಾಗಿದ್ದೇನೆಂದರೆ ಸರಿ. ನಾವು ದಿಬ್ಬೂರಹಳ್ಳಿಯಲ್ಲಿ ಗಸ್ತು ಕರ್ತವ್ಯದಲ್ಲಿದ್ದೆವು ನಾನು ಮತ್ತು ಚಾ.ಸಾ.**5** ಒಟ್ಟಿಗೆ ಗಸ್ತು ಕರ್ತವ್ಯಕ್ಕೆ ಹೋಗಿದ್ದೆವು. ಶಿಡ್ಲಘಟ್ಟದ ಅಬಕಾರಿ ಕಛೇರಿಯನ್ನು ಆ ದಿನ ನಾವು ಸುಮಾರು **11.30** ಕ್ಕೆ ಬಿಟ್ಟಿರುತ್ತೇವೆ. ನಾನು ಚಾ.ಸಾ.**3,** ಚಾ.ಸಾ.**5** ಮತ್ತು ಬಾಬು ಎನ್ನುವರು ಆ ದಿನ ಕಛೇರಿಯಿಂದ ಟಾಟಾ ಸುಮೋ ವಾಹನದಲ್ಲಿ ಹೊರಟಿರುತ್ತೇವೆ. ಆ ದಿನ ನಾವು ಬಶೆಟ್ಟಿಹಳ್ಳಿ ಮಾರ್ಗವಾಗಿ ದಿಬ್ಬೂರಹಳ್ಳಿಗೆ ಹೋಗಿರುತ್ತೇವೆ. ಶಿಡ್ಲಘಟ್ಟದಿಂದ ನಾವು ನೇರವಾಗಿ ದಿಬ್ಬೂರಹಳ್ಳಿಗೆ ಹೋಗಿರುತ್ತೇವೆ. ಆ ದಿನ ನಾವು ದಿಬ್ಬೂರಹಳ್ಳಿಯ ಒಂದು ಮದ್ಯದ ಬಾರಿನಲ್ಲಿ ಇನ್ಸ್ ಪೆಕ್ಷನ್ ಅನ್ನು ಮಾಡಿರುತ್ತೇವೆ. ಸದರಿ ಮದ್ಯದ ಬಾರಿನ ಹೆಸರು ಮಂಜುನಾಥ ಬಾರ್ ಆಗಿರುತ್ತದೆ. ಆ ದಿನ ನಾವು ನಾಲ್ಕು ಜನ ಮಾತ್ರ ಇದ್ದೆವು. ಬಾರಿನ ಬಳಿ ನಾವು ಸುಮಾರು **12.30** ರವರೆಗೂ ಅಲ್ಲಿಯೇ ಇದ್ದೆವು. ಶಿಡ್ಲಘಟ್ಟ ದಿಂದ ದಿಬ್ಬೂರಹಳ್ಳಿಗೆ **25** ಕಿ.ಮೀ ಇದೆ ಎಂದರೆ ಸರಿ ಮತ್ತು ಅರ್ದ ಗಂಟೆ ಸಮಯ ಆಗುತ್ತದೆಂದರೆ ಸರಿ. ಚಾ.ಸಾ.**5** ರವರಿಗೆ ಒಂದು ವಾಹನದಲ್ಲಿ ಮದ್ಯವನ್ನು ಸಾಗಾಟನೆ ಮಾಡಲಾಗುತ್ತಿದೆ ಎಂದು ಮಾಹಿತಿ ಬಂದಿರುತ್ತದೆ. ಚಾ.ಸಾ.**5** ರವರು ನನಗೆ ನಾಚಗಾನಹಳ್ಳಿ ಗೇಟಿನ ಬಳಿ ಹೋಗಲು ಹೇಳಿದ್ದರಿಂದ ನಾನು ಅಲ್ಲಿಗೆ ಹೋಗಿರುತ್ತೇನೆ. ನಾವು ನಾಚಗಾನಹಳ್ಳಿಗೆ ಗೇಟಿಗೆ ಕುದುಪಕುಂಟೆ ಮಾರ್ಗವಾಗಿ ಹೊಗಿರುತ್ತೇವೆ. ಅಲ್ಲಿಂದ ನಾಚಗಾನಹಳ್ಳಿ ಗೇಟಿಗೆ ಸುಮಾರು **3** ಕಿ.ಮೀ ಅಂತರ ಇರುತ್ತದೆ. ಚಾ.ಸಾ.**5** ರವರಿಗೆ ಸುಮಾರು **01.30** ಗಂಟೆ ಸಮಯದಲ್ಲಿ ಬಾತ್ಮಿದಾರರಿಂದ ಮಾಹಿತಿ ಬಂದಿರುತ್ತದೆ.

**2.** ನಾವು ನಾಚಗಾನಹಳ್ಳಿ ಗೇಟಿನ ಬಳಿ ಹೋದಾಗ ನಾವು **4** ಜನ ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ. ಸದರಿ ಗೇಟಿನ ರಸ್ತೆಯ ಬಳಿ ಸಾಮಾನ್ಯವಾಗಿ ಜನರ ಓಡಾಟ ಇರುತ್ತದೆಂದರೆ ಸರಿ. ನಾವು ಸುಮಾರು **10** ನಿಮಿಷಗಳಲ್ಲಿ ಸದರಿ ಗೇಟಿನ ಬಳಿ ಹೋಗಿರುತ್ತೇವೆ. ನಾವು ಸ್ಥಳಕ್ಕೆ ಹೋದ **05** ನಿಮಿಷಕ್ಕೆ ಒಬ್ಬ ವ್ಯಕ್ತಿ ಆಟೋದಲ್ಲಿ ಬಂದಿರುತ್ತಾನೆ. ಸದರಿ ಆಟೋದಲ್ಲಿ ನಾಲ್ಕೈದು ಜನ ಇದ್ದರು. ಸದರಿ ಆಟೋ ಪ್ಯಾಸೆಂಜರ್ ಆಟೋ ಆಗಿರುತ್ತದೆ. ನಮ್ಮನ್ನು ನೋಡಿ ಆಟೋದಲ್ಲಿದ್ದ ಪ್ರಯಾಣಿಕರು ಓಡಿ ಹೋಗಿರುತ್ತಾರೆ. ಅವರನ್ನು ಹಿಡಿದು ವಿಚಾರಣೆ ಮಾಡಲು ಪ್ರಯತ್ನ ಪಟ್ಟಿರುತ್ತೇವೆ ಆದರೆ ಅವರು ಸಿಕ್ಕಿರುವುದಿಲ್ಲ. ಮು.ಮಾ.**1** ರ ರೀತಿ ಇರುವ ಖಾಲಿ ಮದ್ಯದ ಪ್ಯಾಕೆಟುಗಳು ಎಲ್ಲಾ ಕಡೆ ಸಿಗುತ್ತವೆಂದರೆ ಸರಿ. ಮು.ಮಾ.**1** ರ ಎಲ್ಲಾ ಖಾಲಿ ಪ್ಯಾಕೆಟುಗಳ ಮೇಲೆ ಹಾಗೂ ಇತರ ಪಂಚರ ಸಹಿಯಾಗಲಿ

ಇರುವುದಿಲ್ಲ ಎಂದರೆ ಸರಿ. ಬಿಳಿ ಚೀಲದ ಸಹಿತ ಮದ್ಯದ ಪ್ಯಾಕೆಟಗಳನ್ನು ತೆಗೆದುಕೊಳ್ಳಲಾಗಿರುತ್ತದೆ. ಸದರಿ ಬಿಳಿ ಚೀಲದಲ್ಲಿ ಮದ್ಯದ ಪ್ಯಾಕೆಟಗಳನ್ನು ಹೊರತು ಪಡಿಸಿ ಬೇರೆ ಏನೂ ಇರಲಿಲ್ಲ. ಸಾಕ್ಷಿಗೆ ಈಗ ಒಂದು ಬಿಳಿ ಬಟ್ಟೆಯನ್ನು ತೋರಿಸಲಾಗಿ ಸಾಕ್ಷಿ ಬಿಳಿ ಬಟ್ಟೆ ಚೀಲದ ಮೇಲೆ ಅಂಟಿಸಲಾಗಿದ್ದ ಚೀಟಿಯಲ್ಲಿ ನನ್ನ ಸಹಿ ಇರುತ್ತದೆಂದು ಹೇಳುತ್ತಾರೆ. ಸದರಿ ಚೀಟಿಗೆ ನಾನು ಮತ್ತು ಬಾಬು ಎನ್ನುವರು ಮಾತ್ರ ಸಹಿ ಮಾಡಿರುತ್ತೇವೆ. ಸ್ಥಳದಲ್ಲಿ ಬರವಣಿಗೆಯನ್ನು ಮಾಡಲಾಗಿರುತ್ತದೆ. ಸದರಿ ಬರವಣಿಗೆಯಲ್ಲಿ ಏನು ಬರೆದಿರುತ್ತದೆಂದು ನನಗೆ ಗೊತ್ತು. ಸದರಿ ಬರವಣಿಗೆಗೆ ನಾನು ಚಾ.ಸಾ.**3** ಮತ್ತು **5** ರವರು ಸಹಿ ಮಾಡಿರುತ್ತೇವೆ. ಪಂಚನಾಮೆ ಸಮಯದಲ್ಲಿ ಬೇರೆ ಯಾರು ಸರ್ವಜನಿಕರು ಇರಲಿಲ್ಲ. ಆ ದಿನ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ರೀತಿ ಯಾವುದೇ ದಾಳಿಯನ್ನು ಮಾಡಿರುವುದಿಲ್ಲ ಮತ್ತು ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಆರೋಪಿಗೂ ಯಾವುದೇ ರೀತಿ ಸಂಬಂದ ಇಲ್ಲ ಎಂದರೆ ಸರಿಯಲ್ಲ. ದಾಳಿ ಸಮಯದಲ್ಲಿ ತಾಲ್ಲೂಕು ಪಂಚಾಯ್ತಿ ಮತ್ತು ಜಿಲ್ಲಾ ಪಂಚಾಯ್ತಿಗೆ ಸಂಬಂದಪಟ್ಟ ಚುನವಾಣಾ ನೀತಿ ಸಂಹಿತೆ ಇರುತ್ತದೆಂದರೆ ಸರಿ. ಚುನಾವಣಾ ಅಂಕಿ ಅಂಶದ ಸಲುವಾಗಿ ಆರೋಪಿಯ ಮೇಲೆ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ನಾನು ಯಾವುದೇ ಮಹಜರಿಗೆ ಸಹಿ ಮಾಡಿಲ್ಲ ಮತ್ತು ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಶಿಡ್ಲಘಟ್ಟ.